**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂ:23/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | :- | ಚಂದ್ರಶೇಖರ | ಪಿಡಬ್ಲ್ಯೂ:-7 |
| ತಂದೆಯ ಹೆಸರು | :- | ಸಿದ್ದಯ್ಯ | ಸಿಡಬ್ಲ್ಯೂ:-8 |
| ವಯಸ್ಸು | :- | 43 ವರ್ಷ | |
| ಉದ್ಯೋಗ | :- | ವ್ಯವಸಾಯ | |
| ವಾಸ ಸ್ಥಳ | :- | ಗುಂಗರಹಳ್ಳಿ, ಲಕ್ಯಾ ಹೋಬಳಿ | |

ದಿನಾಂಕ:-27-07-2016 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**-ಃ ಮುಖ್ಯ ವಿಚಾರಣೆ ವಿಷೇಶ ಪಿ.ಪಿ. ರವರಿಂದ :-**

2. ನನಗೆ ಲಕ್ಷ್ಮಯ್ಯ ರವರ ಪರಿಚಯ ಇದೆ. 2-1/2 ವರ್ಷಗಳ ಹಿಂದೆ ಮಧ್ಯಾಹ್ನ ನಮ್ಮ ಗ್ರಾಮದವರೆಲ್ಲ ಹಂಚಿಹಳ್ಳಿಗೆ ಹೋಗಿದ್ದರು ನಾನು ಹೋಗಿದ್ದೆ. ಅಲ್ಲಿ ಪೊಲೀಸರು ಮತ್ತು ಉಪ ವಿಭಾಗಾಧಿಕಾರಿಗಳು ಇದ್ದರು. ಹರೀಶನ ಹೂತಾಕಿದ್ದ ಜಾಗವನ್ನು 1ನೇ ಆರೋಪಿ ತೋರಿಸಿದರು. ಮಣ್ಣನ್ನು ತೆಗೆದರು, ಅಲ್ಲಿ ಮೃತ ದೇಹ ಕಂಡು ಬಂತು. ಮೃತ ದೇಹ ಕೊಳೆತಿತ್ತು, ದೇಹದ ಮೇಲೆ ಒಂದು ಕಾಚ ಇತ್ತು, ರೆಟ್ಟೆಯಲ್ಲಿ ಒಂದು ತಾಯಿತಾ ಇತ್ತು, ಮೃತ ದೇಹ ಯಾರದು ಅಂತ ನನಗೆ ಗೊತ್ತಾಗಲಿಲ್ಲ. ಮೃತರ ತಂದೆ ತಾಯಿ ಬಂದಿದ್ದರು ಆತನ ದೇಹವನ್ನು ಗುರುತಿಸಿದರು. ನಿಪಿ3 ರಲ್ಲಿ ನನ್ನ ಸಹಿ ಇದೆ ಅದನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು. ಮೃತನ ರೆಟ್ಟೆಯಲ್ಲಿ ಇದ್ದ ತಾಯಿತಾ ಮತ್ತು ಕಾಚವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಮು.ಮಾ2 ಮತ್ತು 3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದ: 1ನೇ ಆರೋಪಿತನ ಪರವಾಗಿ::-**

3. ಪೊಲೀಸರು ಸ್ಥಳಕ್ಕೆ ಬರಬೇಕೆಂದು ನೋಟೀಸ್‌ನ್ನು ಕೊಟ್ಟಿರಲಿಲ್ಲ. ನಾನು ಆ ಸಮಯದಲ್ಲಿ ಗ್ರಾಮ ಪಂಚಾಯಿತಿಯ ಮುಖ್ಯಸ್ಥ ಅಥವಾ ಸದಸ್ಯನಾಗಿರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಸುಮಾರು 100 ಜನ ಸೇರಿದ್ದರು. ಅಲ್ಲಿ ಗ್ರಾಮದ ಮುಖ್ಯಸ್ಥರಾಗಿ ಯಾರು ಇದ್ದರು

ಪಿ.ಡಬ್ಲ್ಯೂ:-7

ಎಂದು ನನಗೆ ಹೇಳಲು ಆಗುವುದಿಲ್ಲ. ಆ ಗುಂಪಿನಲ್ಲಿ ವೈದ್ಯರು ಇರಲಿಲ್ಲ. 1ನೇ ಆರೋಪಿಗೆ ಕೈಕೊಳ ಹಾಕಿತ್ತು. ಹಂಚಿಹಳ್ಳಿಗೂ ಮತ್ತು ನಮ್ಮ ಊರಿಗೂ ಸುಮಾರು 3 ಕಿ.ಮಿ ಆಗುತ್ತದೆ. ಮೃತ ದೇಹವನ್ನು ತೆಗೆದಾಗ ಆತನ ಮೈ ಮೇಲೆ ಚರ್ಮ ಇರಲಿಲ್ಲ ಆತನನ್ನು ಗುರುತು ಹಚ್ಚಲು ಆಗಲಿಲ್ಲ. ಮೃತ ದೇಹದ ಮೇಲೆ ಏನು ಗಾಯಗಳು ಆಗಿತ್ತು ಎಂದು ಗುರುತಿಸುವ ಪರಿಸ್ಥಿತಿ ಇರಲಿಲ್ಲ. ಶವ ಪೂರ್ತಿ ಕೊಳೆತು ಹೋಗಿತ್ತು ಎಂದರೆ ಚರ್ಮ ಮಾತ್ರ ಕೊಳೆತಿತ್ತು ಎಂದು ಸಾಕ್ಷಿ ಹೇಳುತ್ತಾರೆ. ಮೃತನನ್ನು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿ. ಮೃತನ ಶವದ ಅಳತೆ ಮಾಡಲಿಲ್ಲ. ಮೃತನ ತಂದೆ ತಾಯಿಗಳು ಆತನ ಕಾಚ ಮತ್ತು ತಾಯಿತವನ್ನು ನೋಡಿ ಗುರುತು ಹಚ್ಚಿದ್ದನ್ನು ಬಿಟ್ಟರೆ ಬೇರೆ ಯಾವುದೇ ಗುರುತುಗಳು ಇರಲಿಲ್ಲ. ಬರವಣಿಗೆಯನ್ನು ನಾನು ಓದಿ ನೋಡಿರುವುದಿಲ್ಲ. ಶವ ಸಿಕ್ಕಿದ ಜಾಗದ ಚಕ್ಕುಬಂದಿ ಮತ್ತು ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನ್ನನ್ನು ಬಿಟ್ಟು ಬೇರೆ ಯಾರು ಪಂಚನಾಮೆಗೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು 1.30 ಗಂಟೆಗೆ ಹೋಗಿದ್ದೆ 4 ಗಂಟೆ ವಾಪಸ್ಸು ಬಂದೆ. ಆ ಮಧ್ಯ ಮಹಜರ್‌ನ್ನು ಬರೆದಿರುತ್ತಾರೆ. ಮಹಜರ್‌ನ್ನು ಬರೆಯಲು ಎಷ್ಟು ಸಮಯ ತೆಗೆದುಕೊಂಡರು ಎಂದು ನೆನಪಿಲ್ಲ. ಆ ಬರವಣಿಗೆಯನ್ನು ಪೊಲೀಸರು ಬರೆದರು ಎಂದರೆ ಸರಿ. 1ನೇ ಆರೋಪಿ ಅಲ್ಲಿ ಇರಲಿಲ್ಲ. ಶವ ಊತ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಇದ್ದ ಉಪವಿಭಾಗಾಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಅಲ್ಲಿ ಇದ್ದ ಪೊಲೀಸ್ ಅಧಿಕಾರಿಯ ಹೆಸರು ಮತ್ತು ಹುದ್ದೆ ಗೊತ್ತಿಲ್ಲ. ತಾಯಿತಾ ಮತ್ತು ಕಾಚವನ್ನು ಪೊಲೀಸರು ವಶಪಡಿಸಿಕೊಂಡಿಲ್ಲ. ಮೃತನ ತಂದೆ ತಾಯಿಗಳು ಕಾಚ ಮತ್ತು ತಾಯಿತದ ಮೂಲಕ ಶವವನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ.

***<u>ಪಾಟೀ ಸವಾಲು ಶ್ರೀ ಹೆಚ್.ಎಂ.ಎಸ್. ವಕೀಲರಿಂದ: 2 ರಿಂದ 7ನೇ ಆರೋಪಿತರ ಪರವಾಗಿ::-</u>***

4. ನಾನು ಸ್ಥಳಕ್ಕೆ ಹೋದಾಗ 1.30 ಗಂಟೆಯಾಗಿತ್ತು. ನಾವು ಹೋಗುತ್ತಿದ್ದಾಗ ಪೊಲೀಸರು ಸಹ ಬಂದರು. ನಾನು ಲಕ್ಷ್ಮಯ್ಯನ ಜೊತೆ ಇರಲಿಲ್ಲ. ಅವರು ಏನು ಹೇಳಿಕೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಪಿ.ಡಬ್ಲ್ಯೂ:-7**

*5. ಉಳಿದ ಆರೋಪಿಗಳ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.*

**ಮರು ವಿಚಾರಣೆ: ಇಲ್ಲ**

*(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)*

*ಓ.ಹೇ.ಕೇ.ಸ.ಇ.ಎ.ಒ.*

Sd/-
***(ಡಿ.ಕಂಬೇಗೌಡ)***
***2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು***
***ಚಿಕ್ಕಮಗಳೂರು.***

ಮಾಃ